**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 348/2014**

**ಸಾಕ್ಷಿಗೆ ದಿನಾಂಕ 2.4.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀನಿವಾಸ | ಪಿ.ಡಬ್ಲ್ಯೂ-6 |
| ತಂದೆಯ/ಗಂಡನ ಹೆಸರು | : | ನಿಂಗೇಗೌಡ | ಸಿ.ಡಬ್ಲ್ಯೂ-21 |
| ವಯಸ್ಸು | : | 53 | |
| ಉದ್ಯೋಗ | : | ಮುಖ್ಯ ಆರಕ್ಷಕರು | |
| ವಾಸಸ್ಥಳ | : | ಟಿ.ನರಸೀಪುರ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2011 ರಿಂದ 2014 ರವರೆಗೆ ಹೆಚ್.ಡಿ.ಕೋಟೆ ಪೋಲೀಸ್ ಠಾಣೆಯಲ್ಲಿ ಪೋಲಸ್ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 4.11.2011 ರಂದು ಚಾಸ 23 ರವರು ನನ್ನನ್ನು ಹೆಚ್.ಡಿ.ಕೋಟೆ ಟೌನಿನ ಲ್ಯಾಂಪ್ಸ ಸೊಸೈಟಿಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಚಾಸ 1 ರವರು ಚಾಸ 14, 15 ಮತ್ತು 18 ರವರ ಸಮಕ್ಷಮ ನಿಪಿ4 ರಂತೆ ಬೆಳಿಗ್ಗೆ 11 ರಿಂದ 11.45 ರವರೆಗೆ ಸ್ಥಳ ಮಹಜರನ್ನು ಮಾಡಿದ್ದು, ಚಾಸ 23 ರವರ ನಿರ್ದೇಶನದಂತೆ ಸದರಿ ಮಹಜರನ್ನು ನಾನೇ ಬರೆದಿರುತ್ತೇನೆ. ಸದರಿ ಮೂಲ ಮಹಜರು ಸಿ.ಸಿ 344/2014 ರಲ್ಲಿ ಹಾಜರುಪಡಿಸಲಾಗಿರುತ್ತದೆ. ಅದರ ಯಥಾಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿದ್ದು ಅದನ್ನು ಈಗಾಗಲೇ ನಿಪಿ4 ಎಂದು ಗುರುತಿಸಲಾಗಿರುತ್ತದೆ. ದಿನಾಂಕ 8.3.2013 ರಂದು ಚಾಸ 23 ರವರು ನನ್ನನ್ನು ಹೆಚ್.ಡಿ.ಕೋಟೆ ಟೌನಿನ ಲ್ಯಾಂಪ್ಸ ಸೊಸೈಟಿಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಚಾಸ 14 ರವರು ಹಾಜರುಪಡಿಸಿದ ಮಹಜರಿನಲ್ಲಿ ನಮೂದಿಸಿರುವ ದಾಖಲೆಗಳನ್ನು ಪಂಚರಾದ ಚಾಸ 15, 16 ಮತ್ತು 20 ರವರ ಸಮಕ್ಷಮ ನಿಪಿ5 ರಂತೆ ಅಮಾನತ್ತುಪಡಿಸಿಕೊಂಡು ಬೆಳಿಗ್ಗೆ 8 ರಿಂದ ಸಂಜೆ 5 ರವರೆಗೆ ಅಮಾನತ್ತು ಮಹಜರನ್ನು ಮಾಡಿದ್ದು, ಚಾಸ 23 ರವರ ನಿರ್ದೇಶನದಂತೆ ಸದರಿ ಮಹಜರನ್ನು ನಾನೇ ಬರೆದಿರುತ್ತೇನೆ. ಸದರಿ ಮೂಲ ಮಹಜರು ಸಿ.ಸಿ 344/2014 ರಲ್ಲಿ ಹಾಜರುಪಡಿಸಲಾಗಿರುತ್ತದೆ. ಅದರ ಯಥಾಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿದ್ದು ಅದನ್ನು ಈಗಾಗಲೇ ನಿಪಿ5 ಎಂದು ಗುರುತಿಸಲಾಗಿರುತ್ತದೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಜಿ.ಎನ್.ಎನ್ ವಕೀಲರಿಂದಃ**

ನಿಪಿ4 ರಂತೆ ಮಹಜರನ್ನು ಮಾಡಿದಾಗ ಸದರಿ ಸೊಸೈಟಿಗೆ ಸಂಬಂಧಿಸಿದಂತೆ ಚಾಸ 23 ರವರು ಯಾವುದೇ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ. ಚಾಸ 23 ರವರು ಪಂಚರಿಗೆ ಲಿಖಿತವಾಗಿ ನೋಟಿಸನ್ನು ನೀಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ4 ಮಹಜರನ್ನು ಸದರಿ ಸ್ಥಳದಲ್ಲಿ ಮಾಡಿರುವುದಿಲ್ಲ, ಮಹಜರ್ ಸಾಕ್ಷಿದಾರರು ಸ್ಥಳದಲ್ಲಿರಲಿಲ್ಲ, ನಿಪಿ4 ಮಹಜರನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ5 ರಂತೆ ಮಹಜರು ಮಾಡುವ ಪೂರ್ವದಲ್ಲಿ ಪಂಚರಿಗೆ ಲಿಖಿತವಾಗಿ ನೋಟಿಸನ್ನು ನೀಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಚಾಸ 23 ರವರು ಸದರಿ ದಿನ ಚಾಸ 14 ರವರು ಹಾಜರುಪಡಿಸಿದ ದಾಖಲೆಗಳನ್ನು ನೋಡಿ ನಿಪಿ5 ಮಹಜರನ್ನು ಬರೆಸಿರುತ್ತಾರೆ. ಸದರಿ ದಿನ ಅಮಾನತ್ತುಪಡಿಸಿಕೊಂಡಿರುವ ದಾಖಲೆಗಳ ಮೇಲೆ ಚೀಟಿ ಅಂಟಿಸಿ ಪಂಚರ ಸಹಿಯನ್ನು ಪಡೆದುಕೊಳ್ಳಲಾಗಿರುತ್ತದೆ. ನ್ಯಾಯಾಲಯದ ಮುಂದಿರುವ ರಿಜಿಸ್ಟರುಗಳ ಮೇಲೆ ಚೀಟಿ ಅಂಟಿಸಿ ಪಂಚರ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ನಿಪಿ5 ರಲ್ಲಿ ನಮೂದಿಸಿರುವ ರಿಜಿಸ್ಟರುಗಳನ್ನು ಲ್ಯಾಂಪ್ಸ ಸೊಸೈಟಿಯಲ್ಲಿ ಅಮಾನತ್ತುಪಡಿಸಿಕೊಂಡಿರುವುದಿಲ್ಲ, ನಿಪಿ5 ನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪಂಚರು ಸದರಿ ದಿನ ಸದರಿ ಸ್ಥಳದಲ್ಲಿ ಹಾಜರಿರಲಿಲ್ಲ, ಅವರ ಸಹಿಯನ್ನು ಸಹ ಠಾಣೆಯಲ್ಲಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡ ರಿಜಿಸ್ಟರುಗಳ ಮೇಲೆ ಕ್ರಮ ಸಂಖ್ಯೆಯನ್ನು ಹೊರತುಪಡಿಸಿ ಬೇರೆ ಯಾವುದೇ ವಿಶಿಷ್ಟ ಗುರುತನ್ನು ಮಾಡಿರುವುದಿಲ್ಲ. ಚಾಸ 23 ರವರ ನಿರ್ದೇಶನದಂತೆ ನಿಪಿ4 ಮತ್ತು ನಿಪಿ5 ಮಹಜರುಗಳನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ